# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಭಾರೀ ಹಿಮಪಾತದ ನಡುವೆಯೂ ಜಮ್ಮು ಕಾಶ್ಮೀರದಲ್ಲಿ ಕಾವಲು ಕಾಯುತ್ತಿರುವ ಸಿಆರ್‌ಪಿಎಫ್ ಯೋಧ


ಸಂಪುಟ : 41 ಸಂಚಿಕೆ : 8 ವಿಕಾರಿ–ಮಾರ್ಗಶೀರ್ಷ ಕಲಿಯುಗಾಬ್ದ 5121 1–12–2019 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಸ್ವದೇಶಿ – ದತ್ತೋಪಂಥ ಠೇಂಗಡಿಯವರ ವಿಚಾರ

ಸಾಮ್ರಾಜ್ಯವಾದಿ ದೇಶ ಬ್ರಿಟನ್ನಿನ ವಿರುದ್ಧದ ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರತಿಯೊಬ್ಬ ಭಾರತೀಯನ ಮನೆಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಪ್ರಾರಂಭಿಸಿದ ಉಪಕ್ರಮಗಳಲ್ಲಿ ಸ್ವದೇಶಿ ಆಂದೋಲನ ಅತ್ಯಂತ ಪ್ರಭಾವಿಯಾಗಿತ್ತು. ಸ್ವಾತಂತ್ರ ಚಳವಳಿಯ ಕಾಲದಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕ್, ಸ್ವಾತಂತ್ರವೀರ ಸಾವರ್ಕರ್, ಮಹರ್ಷಿ ಅರವಿಂದ ಮತ್ತು ಮಹಾತ್ಮಾಗಾಂಧಿಯವರಿಂದ ದೊರೆತ ನೇತೃತ್ವಗಳಿಂದಾಗಿ ಸ್ವದೇಶಿ ಆಂದೋಲನಕ್ಕೆ ಪ್ರಾಂತ–ಭಾಷೆ, ಬಡವ–ಬಲ್ಲಿದ, ಅಕ್ಷರಸ್ಥ–ಅನಕ್ಷರಸ್ಥರೆಂಬ ಭೇದಗಳನ್ನು ಮೀರಿ ಸ್ವಾಭಿಮಾನಿ, ಸ್ವಾವಲಂಬಿ 'ಭಾರತೀಯ ಭಾವ'ವನ್ನು ಜಾಗೃತಗೊಳಿಸಲು ಸಹಾಯವಾಯಿತು. ಆದರೆ, ಸ್ವಾತಂತ್ರದ ನಂತರದ ದಿನಗಳಲ್ಲಿ ದೇಶದ ನಾಯಕತ್ವ ವಹಿಸಿದ್ದ ಸರ್ಕಾರಗಳ ಅಜ್ಞಾನ ಮತ್ತು ಸ್ವದೇಶಿಯ ಚಿಂತನೆಯ ಪರಿಕಲ್ಪನೆಯನ್ನೇ ತಿರಸ್ಕರಿಸಿದ್ದ ನಮ್ಮದೇ ದೇಶದ ತಥಾಕಥಿತ ಬುದ್ಧಿಜೀವಿಗಳ ಪ್ರಭಾವೀ ದುಷ್ಪ್ರಚಾರದಿಂದಾಗಿ 'ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಸೀಮಿತ' ಎಂಬ ಸಂಕುಚಿತ ಅರ್ಥದ ಹಣೆಪಟ್ಟಿಯನ್ನು ಅಂಟಿಸಿಕೊಂಡಿತು. ಕೆಲವೊಮ್ಮೆ ಆಧುನಿಕತೆಯ ವಿರೋಧಿ, ಪ್ರಗತಿ ವಿರೋಧಿಗಳೆಂಬ ಮೂದಲಿಕೆಯ ಧೋರಣೆಗಳನ್ನೂ ಅದು ಎದುರಿಸಬೇಕಾಯಿತು.

### ಸ್ವದೇಶಿ ಚಿಂತನೆಯ ಪುನರಾವಿಷ್ಕಾರ ಮಾಡಿದ ದತ್ತೋಪಂತ ಠೇಂಗಡಿ

ಸ್ವದೇಶಿ ಚಿಂತನೆಯೆಂದರೆ ಅದು ಆರ್ಥಿಕತೆಯ ಏಕಮೇವ ಉದ್ದೇಶಕ್ಕೆ ಮಾತ್ರ ಸೀಮಿತಗೊಳ್ಳದ ವಿಶಾಲ ಜೀವನದರ್ಶನವೆಂಬುದನ್ನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಯೋಗಸಹಿತವಾಗಿ ಸಿದ್ಧಗೊಳಿಸಿ ತೋರಿದವರು ದತ್ತೋಪಂತ ಠೇಂಗಡಿಯವರು. ಸ್ವದೇಶಿಯ ಪ್ರಾಸಂಗಿಕತೆಯ ಕುರಿತಾಗಿ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳುತ್ತ ದತ್ತೋಪಂತರು ಹೀಗೆ ಹೇಳುತ್ತಾರೆ:

"ಸ್ವದೇಶಿಯನ್ನು ಕೇವಲ ಕೆಲವೊಂದಿಷ್ಟು ಸರಕು ಅಥವಾ ಸೇವೆಗಳಿಗೆ ಸಂಬಂಧಿಸಿದ್ದು ಎಂದು ತಿಳಿಯುವುದು ತಪ್ಪು. ಅದೊಂದು ಪ್ರಾಸಂಗಿಕ ಅಂಶ ಮಾತ್ರ. ಮೂಲಭೂತವಾಗಿ ಇದು ರಾಷ್ಟ್ರೀಯ ಸ್ವಾವಲಂಬನೆ, ರಾಷ್ಟ್ರೀಯ ಸ್ವಾಯತ್ತತೆ ಮತ್ತು ಸ್ವಾತಂತ್ರದ ಜೋಪಾಸನೆಗಾಗಿ ತಳೆದ ದೃಢಸಂಕಲ್ಪಕ್ಕೆ ಸಂಬಂಧಿಸಿದ್ದು".

ಇಂತಹ ವಿಸ್ತೃತ ತಳಹದಿಯನ್ನು ಹೊಂದಿರುವುದರಿಂದಲೇ ಅದು ಸಂಪೂರ್ಣ ಮಾನವ ಸಮಾಜಕ್ಕೆ ದಾರಿದೀಪವಾಗಬಲ್ಲ ಶಾಶ್ವತ ಮೌಲ್ಯವಾಗಿದೆ. ಮಾನವ ಜೀವನದ ಯಾವುದೇ ಕ್ಷೇತ್ರವನ್ನು ಸ್ವದೇಶಿ ಚಿಂತನೆಯಿಂದ ಬೇರ್ಪಡಿಸಿ ನೋಡುವುದು ಸ್ವದೇಶಿ ಚಿಂತನೆಗೆ ಹೊಂದಾಣಿಕೆಯಾಗುವುದಿಲ್ಲ. ಇದು ಠೇಂಗಡಿಯವರ ಕಾಣ್ಕೆಯಾಗಿತ್ತು. ಈ ಕಾಣ್ಕೆಯೇ ಅವರಿಂದ 'ಭಾರತೀಯ ಮಜ್ದೂರ್ ಸಂಘ'(1955) ದಂತಹ ಕಾರ್ಮಿಕ ಸಂಘಟನೆ ಮತ್ತು 'ಸ್ವದೇಶೀ ಜಾಗರಣ ಮಂಚ್' (1991) ನ ಸ್ಥಾಪನೆಗೆ ಬೀಜಾರೋಪಣೆಯನ್ನು ಮಾಡಿಸಿದ್ದು.


### ಆಧುನಿಕ ಕಾಲದಲ್ಲಿ ಸ್ವದೇಶಿಯ ಪ್ರಾಸಂಗಿಕತೆ

ಆಧುನಿಕ ಜಗತ್ತಿನಲ್ಲಿ, ಬಂಡವಾಳಶಾಹಿ ವಿಚಾರದ ಆಧಾರದಲ್ಲಿ ವೈಶ್ವಿಕ ಮಾರುಕಟ್ಟೆಯ ಆರ್ಥಿಕತೆಯನ್ನು ನಿಯಂತ್ರಿಸಬಯಸುವ ಪಾಶ್ಚಾತ್ಯ ಚಿಂತನೆ ಒಂದೆಡೆಯಾದರೆ, ಸರ್ಕಾರವನ್ನೇ ಎಲ್ಲದಕ್ಕೂ ಹೊಣೆಗಾರನನ್ನಾಗಿಸಿ ಪ್ರಜೆಗಳನ್ನು ಪ್ರತಿ ಹಂತದಲ್ಲೂ ಸರ್ಕಾರದ ಮೇಲೆಯೇ ಅವಲಂಬಿಸುವಂತೆ ಮಾಡುವ ಸಾಮ್ಯವಾದಿ–ಸಮಾಜವಾದಿ ಚಿಂತನೆ ಮತ್ತೊಂದೆಡೆ. ಇವೆರಡಕ್ಕೂ ಹೊರತಾದ ನೆಲ– ಜಲ–ಕಾನನಗಳ ಸಮೇತ ಸಮಷ್ಟಿಯ ಹಿತರಕ್ಷಣೆಯನ್ನೇ ಧ್ಯೇಯವಾಗಿ ಹೊಂದಿರುವ ಮೂರನೆಯ ಪರ್ಯಾಯವೇ ಸ್ವದೇಶಿ. ಇದಕ್ಕೆ ಪೂರಕವಾಗಿ ಸ್ಮರಿಸಬಹುದಾದ ಘಟನೆಗಳಿಗೆ ಕೆಲದಿನಗಳ ಹಿಂದಷ್ಟೇ ವಿಶ್ವ ಸಾಕ್ಷಿಯಾಯಿತು. ಆ ಪ್ರಸಂಗ ಹೀಗಿದೆ. ಆರ್‌ಸಿಇಪಿ ಎಂಬುದು ವಿಶ್ವದ 16 ರಾಷ್ಟ್ರಗಳು ಸೇರಿ ಮಾಡಿಕೊಳ್ಳುತ್ತಿರುವ ಬೃಹತ್ ವ್ಯಾಪಾರಗಳ ಒಂದು ಒಪ್ಪಂದ. ಇದರಲ್ಲಿ ಭಾರತ ಸೇರಿ ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟದ 10 ದೇಶಗಳು ಹಾಗೂ ಈ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿರುವ ಆಸ್ಟ್ರೇಲಿಯಾ, ಚೀನಾ, ದಕ್ಷಿಣ ಕೊರಿಯಾ, ಜಪಾನ್ ಮತ್ತು ನ್ಯೂಜಿಲೆಂಡ್ ಈ 6 ರಾಷ್ಟ್ರಗಳೂ ಇವೆ. ಈ 16 ದೇಶಗಳ ಮಧ್ಯೆ ಒಪ್ಪಂದವಾಗಿದ್ದರೆ ವಿಶ್ವ ಜಿಡಿಪಿಯ ಶೇ. 30ರಷ್ಟು ಭಾಗ ಮತ್ತು ವಿಶ್ವದ ಜನಸಂಖ್ಯೆಯಲ್ಲಿ ಅರ್ಧದಷ್ಟು ಭಾಗವನ್ನು ಹೊಂದಿರುವ ಈ 16 ರಾಷ್ಟ್ರಗಳ ಮಧ್ಯದ ಒಪ್ಪಂದ ವಿಶ್ವದಲ್ಲೇ ಬೃಹತ್ ಒಪ್ಪಂದ ಎನಿಸುತ್ತಿತ್ತು. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿಯೇ ಅನೇಕ ಸುತ್ತಿನ ಮಾತುಕತೆಗಳನ್ನು ಮುಗಿಸಿದ್ದ ಭಾರತಕ್ಕೆ ಆರ್‌ಸಿಇಪಿಗೆ ಒಪ್ಪಿಗೆ ಸೂಚಿಸುವಂತೆ ಅಪಾರ ಒತ್ತಡವಿತ್ತು.

ಇದೇ ನವೆಂಬರ್ 4 ರಂದು ಇದರ ಕೊನೆಯ ಸುತ್ತಿನ ಮಾತುಕತೆಯಲ್ಲಿ ಸದ್ಯದ ನಿಯಮಾವಳಿಗಳ ಅನುಸಾರವಾಗಿ ಈ ಒಪ್ಪಂದಕ್ಕೆ ಸಹಿ ಹಾಕಲು ತಾನು ಸಿದ್ಧನಿಲ್ಲ ಎಂಬ ದಿಟ್ಟ ನಿರ್ಧಾರವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ತೆಗೆದುಕೊಂಡರು. ಇದಕ್ಕೆ ಮುಖ್ಯ ಕಾರಣ ಈ ಒಪ್ಪಂದಕ್ಕೆ ಸಹಿ ಹಾಕಿದಲ್ಲಿ ಚೀನಾದ ರಾಶಿಗಟ್ಟಲೆ ಸರಕಿನ ಜೊತೆಗೇ ನ್ಯೂಜಿಲೆಂಡ್‌ನ ಹಾಲು ಮಾತು ಜಪಾನಿನ ಹೈನು ಉತ್ಪಾದಗಳನ್ನೂ ತನ್ನ ಮಾರುಕಟ್ಟೆಗೆ ಬಿಟ್ಟುಕೊಳ್ಳಬೇಕಾದ ಒತ್ತಡಕ್ಕೆ ಭಾರತ ಸಿಲುಕುತ್ತಿತ್ತು. ಪರಿಣಾಮವಾಗಿ ಭಾರತೀಯ ಸಮಾಜದ ದುರ್ಬಲ ವರ್ಗಗಳು ಮತ್ತು ಆರ್ಥಿಕತೆಯ ದುರ್ಬಲ ವಲಯಗಳು, ವಿಶೇಷವಾಗಿ ಸಣ್ಣ ರೈತರು, ಮಧ್ಯಮ ಮತ್ತು ಸಣ್ಣ–ಪ್ರಮಾಣದ ಉದ್ಯಮಗಳು (ಎಂಎಸ್‌ಎಂಇ) ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಹರಸಾಹಸ ಪಡಬೇಕಾಗಿತ್ತು. ಸಮಯವಿರುವಾಗಲೇ ಸರ್ಕಾರದ ಮೇಲೆ ಒತ್ತಡ ಹೇರಿ ಇಂತಹ ಒಪ್ಪಂದಕ್ಕೆ ಮಣಿಯದಂತೆ ಪ್ರಭಾವ ಬೀರುವಲ್ಲಿ ಪ್ರಮುಖ ಪಾತ್ರವಹಿಸಿದ್ದು ದತ್ತೋಪಂತ್ ಠೇಂಗಡಿಯವರು ತೋರಿದ ಮಾರ್ಗದಲ್ಲಿಯೇ ನಡೆಯುತ್ತಿರುವ ಸ್ವದೇಶಿ ಜಾಗರಣ ಮಂಚ್ ಮತ್ತು ಭಾರತೀಯ ಮಜ್ದೂರ್ ಸಂಘದಂತಹ ಸಂಘಟನೆಗಳು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೇ.

### ಪ್ರಗತಿಯ ಮಾನದಂಡಗಳು

ಹೆಚ್ಚು ಹೆಚ್ಚು ಸಾಮಗ್ರಿಗಳ ಬಳಕೆ, ಅವುಗಳ ತಯಾರಿಕೆಗೆ ಹೆಚ್ಚು ಹೆಚ್ಚು ತಂತ್ರಜ್ಞಾನ – ಈ ಸೂತ್ರಗಳನ್ನು ಆಧರಿಸಿದ ಸಮಾಜ ವ್ಯವಸ್ಥೆ ಇಂದು ನಮ್ಮ ಕಣ್ಣಮುಂದಿದೆ. ಇಂತಹ ವ್ಯವಸ್ಥೆಗಳು ಸೃಷ್ಟಿಸುವ ನಿರುದ್ಯೋಗ, ಬಡತನ, ಸಾಲದ ಸುಳಿಗಳು, ನಾಗರಿಕರ ತಲಾ ಉಳಿತಾಯದಲ್ಲಾಗುವ ವ್ಯತ್ಯಾಸ, ಸ್ಥಳೀಯ ಉದ್ಯೋಗದಾತರ, ಕುಶಲಕರ್ಮಿಗಳ ಸಮಸ್ಯೆಗಳ ಅರಿವೂ ನಮಗಿದೆ.



ಇಂತಹ ಪರಿಸ್ಥಿತಿಗಳಿಂದಾಗಿ ಹುಟ್ಟಿಕೊಳ್ಳುವ ಹವಾಮಾನ ವೈಪರೀತ್ಯದಂತಹ ವಿಷಮತೆಗಳ ಪರಿಣಾಮವನ್ನೂ ನಾವು ಅನುಭವಿಸುತ್ತಿದ್ದೇವೆ. ಮುಕ್ತ ವ್ಯಾಪಾರ, ತಂತ್ರಜ್ಞಾನದ ವರ್ಗಾವಣೆ, ಸಾಲ, ವಿದೇಶಿ ನೇರ ಬಂಡವಾಳ ಮುಂತಾದ ತಥಾಕಥಿತ ಪ್ರಗತಿಯ ಪ್ರಣಾಳಿಗಳ ನಂತರವೂ ಜಗತ್ತಿನ ಅಧಿಕಾಂಶ ದೇಶಗಳ ಸರ್ಕಾರಗಳು ಮತ್ತು ಅಲ್ಲಿನ ಬಹುಪಾಲು ಜನವರ್ಗಗಳು 'ಪ್ರಗತಿ'ಯಿಂದ ದೂರವೇ ಉಳಿದಿದ್ದಾರೆ. ಒಂದು ದೇಶದ ಒಟ್ಟು ಉತ್ಪಾದನೆ (ಜಿಡಿಪಿ) ಹೆಚ್ಚಿದಲ್ಲಿ ಬಡತನ ನಿರ್ಮೂಲವಾಗುತ್ತದೆ ಎಂದು ಘೋಷಿಸಿದವರೇ ಇಂದು ತಮ್ಮದೇ ವಾದದ ಸಮರ್ಥನೆಗಿಳಿಯುವುದಿಲ್ಲ. ಈ ಬಣ್ಣಬಣ್ಣದ ಮಾತುಗಳಿಗೆ ಮರುಳಾಗಿ, ಬಡವರ ಹೆಸರಿನಲ್ಲಿ ಘೋಷಿತವಾದ ಯೋಜನೆಗಳನ್ನು ಪಡೆದ ಬಹುತೇಕ ನಗರಗಳಲ್ಲಿಯೇ ಇರುವ ಸಾಮಾಜಿಕ ಅಂತರ ಕಣ್ಣಿಗೆ ರಾಚುವಂತಿದೆ. ಇದರರ್ಥ, ಈ ಮೊದಲು ದೇಶದ ಪ್ರಗತಿಗೆ ಮಾನದಂಡಗಳು ಎಂದು ಘೋಷಿಸಿಕೊಂಡಿದ್ದ ಅಂಶಗಳೇ ನಾವು ಕಾಣುತ್ತಿರುವ ಸಮಸ್ಯೆಗಳ ಮೂಲದಲ್ಲಿವೆ ಎಂಬುದೇ ಆಗಿದೆ.

ಸ್ವದೇಶಿಯ ಚಿಂತನೆ ಕಟ್ಟಿಕೊಡುವ ಪ್ರಗತಿಯ ಮಾನದಂಡಗಳೇ ಸಂಪೂರ್ಣ ಭಿನ್ನ. ಸ್ವದೇಶಿ ದರ್ಶನದ ಪ್ರಕಾರ ಜೀವನದ ಗುಣಮಟ್ಟವೂ ವ್ಯಕ್ತಿಯ ನೈತಿಕ ಮಟ್ಟವೂ ಪ್ರಗತಿಯ ಮಾನದಂಡಗಳೆನಿಸಲು ಅರ್ಹವೇ ಹೊರತು ಬಗೆಬಗೆಯ ವಸ್ತುಗಳ ರಾಶಿಗಳಾಗಲಿ, ಬಳಕೆಯ ಪ್ರಮಾಣವಾಗಲಿ ಅಲ್ಲ. ಅಗತ್ಯಕ್ಕೆ ಮೀರಿದ ವಸ್ತುಗಳ ಉತ್ಪಾದನೆಯಾಗಲಿ, ಬಳಕೆಯಾಗಲಿ ಸ್ವದೇಶೀ ಪ್ರಣಾಳಿಕೆಗೆ ವ್ಯತಿರಿಕ್ತವಾದದ್ದು. ಮಾನಸಿಕ ಮತ್ತು ಬೌದ್ಧಿಕ ಸ್ವಾತಂತ್ರ್ಯಗಳೇ ಬಾಹ್ಯ ಸ್ವಾವಲಂಬನೆಗೆ ಆಧಾರವಾಗಬಲ್ಲವು. ಆದ್ದರಿಂದ ಬಗೆಬಗೆಯ ಪ್ರಲೋಭನೆಗಳಿಗೆ, ಭ್ರಮೆಗಳಿಗೆ ಒತ್ತೆ ಇಟ್ಟಿರುವ ನಮ್ಮ ಮನಸ್ಸು ಬುದ್ಧಿಗಳನ್ನು ಬಿಡಿಸಿ ಮುಕ್ತಗೊಳಿಸಿಕೊಳ್ಳುವುದೇ ಇಂದಿನ ಮೊದಲ ಅಗತ್ಯ. ನಮ್ಮ ಮೇಲೆಯೇ ವಿಜಯ ಸಾಧಿಸಬಹುದಾದಲ್ಲಿ ಮಾತ್ರವೇ ಹೊರಗಿನ ಸನ್ನಿವೇಶಗಳನ್ನೂ ಗೆಲ್ಲಬಲ್ಲೆವು.


### ಪರಿಹಾರ

ಪ್ರಕೃತಿಯ ಮತ್ತು ಎಲ್ಲ ಜೀವಗಳ ಬಗೆಗೆ ಗೌರವ ಬುದ್ಧಿ, ಹೆಚ್ಚಿನ ದಿನಬಳಕೆ ವಸ್ತುಗಳ ಸ್ಥಳೀಯ ಉತ್ಪಾದನೆ, ಉದ್ಯೋಗಶೀಲತೆಗೆ ಮಹತ್ತ್ವ, ವಿಕೇಂದ್ರೀಕೃತ ಆರ್ಥಿಕತೆ, ಜೀವನಾಧಾರವಾದ ಕೃಷಿ–ಪಶುಸಂಗೋಪನೆ, ಕರಕುಶಲ ಉದ್ಯಮಗಳಿಗೆ ಪ್ರಾಶಸ್ತ್ಯ, ಸ್ಪರ್ಧೆಗಿಂತ ಸಾಮರಸ್ಯಕ್ಕೆ ಮಹತ್ವ. ಎಲ್ಲ ಜೀವನ ವ್ಯವಹಾರಗಳೂ ಆಧ್ಯಾತ್ಮಿಕ ಉತ್ಕರ್ಷಕ್ಕೆ ಪೋಷಕವಾಗುವಂತೆ ಇರಬೇಕೆಂಬ ಶ್ರದ್ಧೆ, ಈಗಿನ ಪೀಳಿಗೆಗೆ ಮಾತ್ರವಲ್ಲದೇ ಗತಪೀಳಿಗೆಗಳೂ ಮತ್ತು ಮುಂದಿನ ಪೀಳಿಗೆಗಳ ಬಗೆಗೂ ನಮ್ಮ ಹೊಣೆಗಾರಿಕೆ ಇರುತ್ತದೆಂಬ ನಿಷ್ಠೆ, ದುರ್ಬಲರ, ಅಂಗವಿಕಲರ, ರೋಗಗ್ರಸ್ತರ ಮತ್ತಿತರ ಅಸಹಾಯಕರ ಕ್ಷೇಮ ಇಡೀ ಸಮಾಜದ ಹೊಣೆಯೆಂಬ ಅರಿವು – ಇದೇ ಹಿಂದೂ ಜೀವನ ದೃಷ್ಟಿ. ಇದೇ ಮಾನವಧರ್ಮ ದೃಷ್ಟಿ. ಇದುವೇ ತಿಲಕರಾದಿಯಾಗಿ ದತ್ತೋಪಂತ ಠೇಂಗಡಿಯಂತಹ ಎಲ್ಲ ಮಹನೀಯರು ನಮಗೆ ನೀಡಿರುವ ಸ್ವದೇಶೀ ಜೀವನ ಪರಿಹಾರ ಪ್ರಣಾಳಿ.

### ಅಯೋಧ್ಯೆಯಲ್ಲಿ ಮಂದಿರ: ಕೋರ್ಟ್ ಆದೇಶ

ದೇಶಾದ್ಯಂತ ಕುತೂಹಲ ಕೆರಳಿಸಿದ್ದ ಅಯೋಧ್ಯೆಯ ಶ್ರೀರಾಮ ಜನ್ಮಭೂಮಿಗೆ ಸಂಬಂಧಿಸಿದ ಪ್ರಕರಣದ ತೀರ್ಪು ನವೆಂಬರ್ 9 ರಂದು ಹೊರಬಂದಿದ್ದು, ಸುಪ್ರೀಂ ಕೋರ್ಟ್ ವಿವಾದಿತ ಸಂಪೂರ್ಣ 2.77 ಎಕರೆ ಜಾಗವನ್ನು ರಾಮ ಮಂದಿರ ನಿರ್ಮಾಣಕ್ಕೆ ನೀಡಿ ಆದೇಶಿಸಿದೆ. ಇದರೊಂದಿಗೆ ಶತಮಾನಗಳ ಕಾಲ ನಡೆದಿದ್ದ ಹೋರಾಟ ಒಂದು ತಾರ್ಕಿಕ ಅಂತ್ಯ ಕಂಡಂತಾಗಿದೆ. ವಿದೇಶೀ ಆಕ್ರಮಣಕಾರರ ಕೈಗೆ ಸಿಕ್ಕು ನಾಶವಾಗಿದ್ದ, ಮರ್ಯಾದಾ ಪುರುಷೋತ್ತಮ ಶ್ರೀರಾಮನ ಜನ್ಮಸ್ಥಾನದಲ್ಲಿ ಭವ್ಯ ಮಂದಿರ ನಿರ್ಮಾಣದ ಕಾಲ ಸನ್ನಿಹಿತವಾಗಿದೆ. ಕೇಂದ್ರ ಸರ್ಕಾರ ಟ್ರಸ್ಟ್ ಒಂದನ್ನು ರಚಿಸಿ ಮಂದಿರ ನಿರ್ಮಾಣದ ಜವಾಬ್ದಾರಿಯನ್ನು ಅದಕ್ಕೆ ವಹಿಸಲಿದೆ. ಮಸೀದಿ ನಿರ್ಮಾಣಕ್ಕೆ ಬೇರೆಡೆ 5 ಎಕರೆ ಜಾಗ ನೀಡುವಂತೆ ಕೇಂದ್ರ ಸರ್ಕಾರಕ್ಕೆ ನ್ಯಾಯಾಲಯ ಆದೇಶಿಸಿದೆ.

## ಸಂಸ್ಮರಣೆ ಪ್ರಫುಲ್ಲಚಂದ್ರ ರೇ (2 ಆಗಸ್ಟ್ 1861 – 16 ಜೂನ್ 1944)



1922ರಲ್ಲಿ ಉತ್ತರ ಬಂಗಾಳದಲ್ಲಿ ಕಾಣಿಸಿಕೊಂಡ ಧೀಡೀರ್ ಪ್ರವಾಹ ಲಕ್ಷಾಂತರ ಜನರನ್ನು ತಲೆಯ ಮೇಲೆ ಸೂರಿಲ್ಲದ ಬರಿಹೊಟ್ಟೆಯಲ್ಲಿ ಬೀದಿಬೀದಿ ತಿರುಗುವ ನಿರಾಶ್ರಿತರನ್ನಾಗಿಸಿತು. ಇಂತಹ ಪ್ರಸಂಗದಲ್ಲಿ ನಿವೃತ್ತ ಭಾರತೀಯ ರಸಾಯನಶಾಸ್ತ್ರಜ್ಞ, ಶಿಕ್ಷಣತಜ್ಞ ಮತ್ತು ಮಹಾದಾನಿಯೊಬ್ಬ ಅನೇಕರಿಗೆ ಆಶಾಕಿರಣವಾದರು. ತನ್ನ ಜನರ ಸಂಕಷ್ಟಗಳನ್ನು ದೂರಗೊಳಿಸಲು ತಕ್ಷಣವೇ ಕಾರ್ಯಪ್ರವೃತ್ತರಾಗಿ ಬಂಗಾಳ ಪರಿಹಾರ ಸಮಿತಿಯನ್ನು ಸಜ್ಜುಗೊಳಿಸಿದ ಅವರು 25 ಲಕ್ಷ ರೂಪಾಯಿಗಳನ್ನು ನಗದು ಮತ್ತು ವಸ್ತುಗಳ ರೂಪದಲ್ಲಿ ಸಂಗ್ರಹಿಸಿ ಪೀಡಿತ ಜನರಿಗೆ ಹಂಚುವ ವ್ಯವಸ್ಥೆ ಮಾಡಿದರು. ಆ ಮಹಾನುಭಾವರೇ ದೇಶದ ಮೊತ್ತಮೊದಲ ರಸಾಯನಶಾಸ್ತ್ರದ ಸಂಶೋಧನಾ ಶಾಲೆಯೊಂದನ್ನು ಕಟ್ಟಿ ಆಧುನಿಕ ಭಾರತದ ರಸಾಯನಶಾಸ್ತ್ರದ ಅಧ್ವರ್ಯುವೆನಿಸಿದ ಆಚಾರ್ಯ ಪ್ರಫುಲ್ಲಚಂದ್ರ ರೇ.

ಅವರು ಪ್ರಕಟಿಸಿದ 107 ಸಂಶೋಧನಾ ಪ್ರಬಂಧಗಳನ್ನು ಒಳಗೊಂಡಂತೆ ರಸಾಯನಶಾಸ್ತ್ರ ಕ್ಷೇತ್ರಕ್ಕೆ ನೀಡಿದ ಅನೇಕ ಕೊಡುಗೆಗಳ ಹೊರತಾಗಿ, ಪ್ರಫುಲ್ಲಚಂದ್ರರು ತಮ್ಮ ದೂರದೃಷ್ಟಿಗೂ ಹೆಸರುವಾಸಿ. ಅವರ ಉದ್ಯಮಶೀಲತೆ ಮತ್ತು ಲೋಕೋಪಕಾರಿ ಮನೋಭಾವದಿಂದಾಗಿಯೇ ಬಂಗಾಳದ ಅನೇಕರಿಗೆ ತಮ್ಮ ಜೀವನಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಯಿತು. ಬ್ರಿಟಿಷ್ ಭಾರತದ ಬಂಗಾಳ ಪ್ರೆಸಿಡೆನ್ಸಿಯಲ್ಲಿ (ಈಗಿನ ಬಾಂಗ್ಲಾದೇಶ) ಜೆಸ್ಸೋರ್ ಜಿಲ್ಲೆಯ (ಈಗಿನ ಖುಲ್ನಾ ಜಿಲ್ಲೆ) ರಾರೂಲಿ–ಕಾಟಿಪಾರಾ ಗ್ರಾಮದಲ್ಲಿ 1861 ರಲ್ಲಿ ಜನಿಸಿದ ರೇ, ಶ್ರೀಮಂತ ಜಮೀನ್ದಾರ ಹರೀಶ್‌ಚಂದ್ರ ರೇ ಚೌಧರಿ ಮತ್ತು ಭುವನ್ಮೋಹಿನಿ ದೇವಿಯ ಏಳು ಮಕ್ಕಳಲ್ಲಿ ಮೂರನೆಯವನು.

ತನ್ನ ತಂದೆ ನಡೆಸುತ್ತಿದ್ದ ಹಳ್ಳಿಯ ಶಾಲೆಯಲ್ಲೇ ಪ್ರಫುಲ್ಲ ಶಿಕ್ಷಣವನ್ನು ಪ್ರಾರಂಭಿಸಿದ. ತನ್ನ ಹತ್ತನೇ ವಯಸ್ಸಿನಲ್ಲಿ ಕಲ್ಕತ್ತೆಗೆ ಹೊರಟ. ಹೇರ್ ಸ್ಕೂಲ್ ನಲ್ಲಿ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದ ಪ್ರಫುಲ್ಲ, ತೀವ್ರತರವಾದ ಭೇದಿಯ ಬಾಧೆಗೆ ತುತ್ತಾದ. ಆರೋಗ್ಯದ ಸುಧಾರಣೆಗೆ ಮತ್ತೆ ತನ್ನ ಹಳ್ಳಿಯ ಮನೆಗೆ ಮರಳಿದ. ಶಿಕ್ಷಣ ಅರ್ಧಕ್ಕೆ ನಿಂತಿದ್ದು ಮೊದಲಿಗೆ ನಿರಾಸೆ ತಂದಿತಾದರೂ, ವಿರಾಮದ ಘಳಿಗೆಯಲ್ಲಿ ಸ್ಫೂರ್ತಿದಾಯಕ ಜೀವನಚರಿತ್ರೆಗಳು, ವಿಜ್ಞಾನ, ಇತಿಹಾಸ, ಭೂಗೋಳ, ಬಂಗಾಳಿ ಸಾಹಿತ್ಯ ಮತ್ತು ಗ್ರೀಕ್, ಲ್ಯಾಟಿನ್, ಫ್ರೆಂಚ್ ಮತ್ತು ಸಂಸ್ಕೃತದಂತಹ ಭಾಷೆಗಳ ಜಗತ್ತನ್ನು ಪ್ರವೇಶಿಸಿದ. 1876ರಲ್ಲಿ, ಮತ್ತೆ ಕಲ್ಕತ್ತಾಗೆ ಮರಳಿ ಆಲ್ಬರ್ಟ್ ಶಾಲೆಯಲ್ಲಿ ಅಧ್ಯಯನಕ್ಕೆ ತೊಡಗಿದ. ಶಾಲೆಯ ಪ್ರವೇಶ ಪರೀಕ್ಷೆಯಲ್ಲಿ (ಮೆಟ್ರಿಕ್ಯುಲೇಷನ್ ಪರೀಕ್ಷೆಗಳು) ಮೊದಲ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಮೆಟ್ರೋಪಾಲಿಟನ್ ಸಂಸ್ಥೆಯಲ್ಲಿ ಕಲಾ ವಿಭಾಗದ ವಿದ್ಯಾರ್ಥಿಯಾಗಿ ಶಿಕ್ಷಣವನ್ನು ಮುಂದುವರಿಸಿದ.

ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಕಲಾ ವಿಭಾಗದ ಡಿಪ್ಲೊಮಾ ಪಡೆದ ನಂತರ, 1882ರ ಆಗಸ್ಟ್‌ನಲ್ಲಿ 21ನೇ ವಯಸ್ಸಿನಲ್ಲಿ ಗಿಲ್ಕ್ರಿಸ್ಟ್ ವಿದ್ಯಾರ್ಥಿವೇತನದಲ್ಲಿ ಎಡಿನ್ಬರ್ಗ್ ವಿಶ್ವವಿದ್ಯಾಲಯಕ್ಕೆ ತೆರಳಿದರು. ಅಲ್ಲಿ ಅವರು ಬಿ.ಎಸ್ಸಿ ಮತ್ತು ಡಿ.ಎಸ್ಸಿ. ಪದವಿಗಳನ್ನು ರಸಾಯನಶಾಸ್ತ್ರದಲ್ಲಿ ಪಡೆದುಕೊಂಡರು. ಜೈವಿಕ ರಸಾಯನಶಾಸ್ತ್ರದ ಹೆಚ್ಚು ಮನ್ನಣೆಗಳಿಸಿದ್ದ ಸಮಯದಲ್ಲಿ, ರೇ ಅಜೈವಿಕ ರಸಾಯನಶಾಸ್ತ್ರದಲ್ಲಿ ತಮ್ಮ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದರು. ಮರ್ಕ್ಯುರಸ್ ನೈಟ್ರೈಟ್ ಮತ್ತು ಅದರ ಉತ್ಪನ್ನಗಳ ಕುರಿತು ವಿಶ್ವದಾದ್ಯಂತ ಗಮನ ಸೆಳೆದ ಹಲವಾರು ಲೇಖನಗಳನ್ನೂ ಪ್ರಕಟಿಸಿದರು.

ಕೈತುಂಬಾ ಸಂಬಳಕೊಡುವ ವಿದೇಶಿ ಕೆಲಸದ ಅವಕಾಶಗಳಿದ್ದಾಗ್ಯೂ 1889 ರಲ್ಲಿ ಭಾರತಕ್ಕೆ ಮರಳಿ ಕೋಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡರು. ತಮ್ಮ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವಲ್ಲಿ ಮತ್ತು ಮೇಘನಾದ್ ಸಹಾ ಮತ್ತು ಶಾಂತಿಸ್ವರೂಪ್ ಭಟ್ನಾಗರ್‌ರಂತಹ ಪ್ರತಿಭಾವಂತರನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದರು.

ದೂರದೃಷ್ಟಿಯುಳ್ಳವರಾಗಿದ್ದ ರೇ, ಕೈಗಾರಿಕೀಕರಣ ಭಾರತದ ಪ್ರಗತಿಯತ್ತ ದೃಢವಾದ ಹೆಜ್ಜೆ ಎಂದೇ ನಂಬಿದ್ದರು. ಈ ನಂಬಿಕೆಯೇ ಅವರಿಂದ ಕೇವಲ 700 ರೂ. ಬಂಡವಾಳದೊಂದಿಗೆ ಭಾರತದ ಮೊದಲ ರಾಸಾಯನಿಕ ಅಥವಾ ಔಷಧಿ ಕಂಪನಿ ಬೆಂಗಾಲ್ ಕೆಮಿಕಲ್ ಅಂಡ್ ಫಾರ್ಮಾಸೂಟಿಕಲ್ ಕಂಪನಿಯನ್ನು ಸ್ಥಾಪಿಸಲು ಕಾರಣವಾಯಿತು. ಸ್ಥಳೀಯ ತಂತ್ರಜ್ಞಾನ, ಕೌಶಲ್ಯ ಮತ್ತು ಕಚ್ಚಾವಸ್ತುಗಳನ್ನು ಬಳಸಿಕೊಂಡು ಗುಣಮಟ್ಟದ ರಾಸಾಯನಿಕ, ಔಷಧಗಳು ಮತ್ತು ಗೃಹಬಳಕೆಯ ಉತ್ಪನ್ನಗಳನ್ನು ತಯಾರಿಸಿದ ಮೊದಲ ಭಾರತೀಯ ಕಂಪನಿಯಾಗಿ ಅದು ಇತಿಹಾಸವನ್ನು ಸೃಷ್ಟಿಸಿತು.

ರೇಗೆ 60 ವರ್ಷ ತುಂಬಿದಾಗ, ತಮ್ಮ ಸೇವಾ ಅವಧಿ ಇನ್ನೂ ಉಳಿದಿರುವಾಗಲೇ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಅಭಿವೃದ್ಧಿ ಮತ್ತು ಸಂಶೋಧನಾ ಫೆಲೋಶಿಪ್‌ಗಳ ರಚನೆಗೆ ಮುಂಗಡವಾಗಿಯೇ ತಮ್ಮ ಎಲ್ಲ ವೇತನವನ್ನೂ ದಾನ ಮಾಡಿದರು. ಅಂತರರಾಷ್ಟ್ರೀಯ ಕಮ್ಮಟಗಳಲ್ಲಿ ಅನೇಕ ಭಾರತೀಯ ವಿಶ್ವವಿದ್ಯಾಲಯಗಳನ್ನು ಪ್ರತಿನಿಧಿಸಿದರು. 1920ರಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿದ್ದರು.

ರೇ ಅವರ ನೇತೃತ್ವದಲ್ಲಿ ಅವರ ಉದ್ಯಮ ತುಂಬ ಪ್ರಗತಿ ಕಂಡಿತು. ಸಹಸ್ರಾರು ಬಂಗಾಳಿ ಯುವಕರಿಗೆ ಉದ್ಯೋಗಾವಕಾಶಗಳನ್ನೂ ಸೃಷ್ಟಿಸಿತು. 1936ರಲ್ಲಿ 75ನೇ ವಯಸ್ಸಿನಲ್ಲಿ ಪ್ರೊಫೆಸರ್ ಎಮೆರಿಟಸ್ ಆಗಿ ನಿವೃತ್ತರಾದ ರೇ 16 ಜೂನ್ 1944 ರಂದು ತಮ್ಮ 82 ನೇ ವಯಸ್ಸಿನಲ್ಲಿ ನಿಧನರಾದರು.

## ಎಲ್ಲೋ ಕೇಳಿದ ಕಥೆ

ಹಳ್ಳಿಯ ಹೊಲವೊಂದರಲ್ಲಿ ಪಕ್ಷಿಯ ಕುಟುಂಬವೊಂದು ವಾಸವಾಗಿತ್ತು. ಪುಟ್ಟಮರಿಗಳಿಗೆ ಹಾರುವ ಶಕ್ತಿ ಇನ್ನೂ ಬಂದಿರಲಿಲ್ಲ. ಜಮೀನಿನಲ್ಲಿ ಬೆಳೆದ ಬೆಳೆ ಕಟಾವಿಗೆ ಬಂದಿತ್ತು. ಜಮೀನಿನ ಮಾಲೀಕ ಯಾವಾಗ ಬೇಕಾದರೂ ಕಟಾವಿಗೆ ಬರುವ ಸಾಧ್ಯತೆಯೇ ತಾಯಿ ಪಕ್ಷಿಯ ಚಿಂತೆಗೆ ಕಾರಣವಾಯ್ತು. ತಾಯಿಪಕ್ಷಿ ತನ್ನ ಮರಿಗಳಿಗೆ "ನಾನಿಲ್ಲದೇ ಇರುವಾಗ ಯಾರಾದರೂ ಇಲ್ಲಿ ಬಂದು ಮಾತನಾಡಿದರೆ ಅದನ್ನು ನೆನಪಿಟ್ಟುಕೊಂಡು ನನಗೆ ಹೇಳಿ" ಎಂದಿತು. ಮಾರನೇ ದಿನ ಸಂಜೆ ತಾಯಿ ಪಕ್ಷಿ ಆಹಾರದೊಡನೆ ಮರಳಿದಾಗ ಮರಿ "ಈ ದಿನ ರೈತ ಬಂದು ಹಳ್ಳಿಯಿಂದ ಕೂಲಿಯವರನ್ನು ಕರೆತಂದು ಪೈರನ್ನು ಕಟಾವು ಮಾಡಿಸಬೇಕು" ಎಂದಿದ್ದನ್ನು ತಿಳಿಸಿತು. ಅದಕ್ಕೆ ತಾಯಿ "ಹೆದರಬೇಡಿ. ಬೆಳೆಯನ್ನು ಈಗಲೇ ಕತ್ತರಿಸುವುದಿಲ್ಲ ಇನ್ನು ಬಹಳ ಸಮಯ ಇದೆ." ಎಂದಿತು.

ಎರಡು ಮೂರು ದಿನಗಳ ನಂತರ ಮತ್ತೆ ಮರಿಗಳು ಹೆದರಿ ತಾಯಿ ಪಕ್ಷಿ ಬಂದಾಗ "ಅಮ್ಮ, ಈಗ ನಾವು ಜಾಗ ಖಾಲಿ ಮಾಡಬೇಕು. ಈ ದಿನ ಆ ರೈತ ಬಂದು 'ಕೂಲಿಯವರು ಯಾರು ಸಿಗುತ್ತಿಲ್ಲ, ನಾಳೆ ನನ್ನ ತಮ್ಮಂದಿರನ್ನು ಕರೆಸಿ ಕಟಾವು ಮಾಡಲು ಹೇಳುತ್ತೇನೆ' ಎಂದ ಮಾತು ತಿಳಿಸಿದವು. ಈ ಬಾರಿಯೂ ತಾಯಿ ತನ್ನ ಮರಿಗಳನ್ನು ತಬ್ಬಿ ಮಕ್ಕಳೇ, ಹೆದರಬೇಡಿ, ಇನ್ನು ಕೆಲದಿನಗಳಲ್ಲಿ ನಿಮಗೆ ಹಾರುವ ಶಕ್ತಿ ಬರುತ್ತದೆ ಅಲ್ಲಿಯವರೆಗೂ ಈ ಬೆಳೆಯ ಕಟಾವು ಆಗುವುದಿಲ್ಲ" ಎಂದು ವಿಶ್ವಾಸದಿಂದ ನುಡಿಯಿತು.

ಇನ್ನೂ ಕೆಲದಿನಗಳ ನಂತರ ಪಕ್ಷಿಗಳ ರೆಕ್ಕೆ ಬಲಿತು ಹಾರಾಡಲು ಸಿದ್ಧವಾದವು. ಆ ದಿನ ರೈತ ಬಂದು "ನಾಳೆ ಬೆಳಗ್ಗೆ ನಾನೇ ಬಂದು ಈ ಬೆಳೆಯ ಕಟಾವು ಮಾಡುತ್ತೇನೆ, ಯಾರನ್ನೂ ನಂಬಿದರೆ ಕೆಲಸವಾಗುವುದಿಲ್ಲ" ಎಂದ ಹೇಳಿದ್ದನ್ನು ಮರಿ ತಾಯಿಪಕ್ಷಿಗೆ ಹೇಳಿತು. ಅದಕ್ಕೆ ತಾಯಿ "ಮಕ್ಕಳೇ ನಡೆಯಿರಿ! ಬೇಗ ಹೊರಡಿ ಇನ್ನೂ ಕತ್ತಲೆಯಾಗಿಲ್ಲ. ಬೇರೆ ಕಡೆಗೆ ಹೋಗುವ, ನಾಳೆ ಖಂಡಿತ ರೈತ ಬೆಳೆ ಕಟಾವು ಮಾಡುತ್ತಾನೆ" ಎಂದಿತು.

ಮರಿಗಳು ಅಚ್ಚರಿಯಿಂದ ಅಮ್ಮ ಈ ಸಾರಿ ಹೇಗೆ ಇಷ್ಟು ವಿಶ್ವಾಸದಿಂದ ಹೇಳುತ್ತಿದ್ದೀಯ? ಎಂದು ಪ್ರಶ್ನಿಸಿದವು. ಅದಕ್ಕೆ ತಾಯಿ, ಮಕ್ಕಳೇ "ಇಲ್ಲಿಯವರೆಗೆ ರೈತ ಕೂಲಿಯವರನ್ನು, ತಮ್ಮಂದಿರನ್ನು ಇತರರನ್ನು ನಂಬಿಕೊಂಡಿದ್ದ. ಇದರಿಂದ ಸಮಯಕ್ಕೆ ಬೆಳೆ ಕಟಾವು ಆಗುವುದಿಲ್ಲ ಎಂಬ ಅರಿವಾಯಿತು. ಇನ್ನೊಬ್ಬರನ್ನು ನಂಬಿದರೆ ಯಾವ ಕೆಲಸವೂ ಆಗದು. ಯಾರು ತಾವೇ ಕೆಲಸ ಮಾಡಲು ಸಿದ್ಧರಾಗುತ್ತಾರೋ ಆ ಕೆಲಸ ನಿಲ್ಲುವುದಿಲ್ಲ. ನಾಳೆ ಬೆಳಿಗ್ಗೆ ಸ್ವತಃ ರೈತನೇ ಪೈರು ಕಟಾವಿಗೆ ಸಿದ್ಧನಾಗಿರುವಾಗ ಕಟಾವು ಆಗಿಯೇ ಆಗುತ್ತದೆ ಎಂದು ಮರಿಗಳನ್ನು ಕರೆದುಕೊಂಡು ಬೇರೆಡೆಗೆ ಹಾರಿತು. ತಮ್ಮ ಕೆಲಸ ತಾವೇ ಮಾಡಬೇಕೆಂಬ ಸಂದೇಶವೇ ಈ ಕತೆಯ ಸಾರಾಂಶ.

## ಪುಣೆ: ಹಾಡಿನ ಮೂಲಕ ಸ್ವಚ್ಛತೆಯ ಅರಿವು ಮೂಡಿಸುವ ಸ್ವಚ್ಛತಾ ಕಾರ್ಮಿಕ

ಪುಣೆ ಮಹಾನಗರ ಪಾಲಿಕೆಯ ಸ್ವಚ್ಛತಾ ಕಾರ್ಮಿಕ ಮಹಾದೇವ್ ಜಾಧವ್ ಅವರು ಹಾಡುಗಳ ಮೂಲಕ ಜನರಿಗೆ ತ್ಯಾಜ್ಯ ನಿರ್ವಹಣೆಯ ಶಿಕ್ಷಣ ಮತ್ತು ಜಾಗೃತಿ ಮೂಡಿಸುವ ಒಂದು ಹೊಸ ವಿಧಾನವನ್ನು ಕಂಡುಹಿಡಿದಿದ್ದಾರೆ. ಹಾಡು ಹಾಡುತ್ತಲೇ ಅವರು ತ್ಯಾಜ್ಯ ನಿರ್ವಹಣೆಯ ಬಗ್ಗೆ ಪರಿಣಾಮಕಾರಿ ಸಂದೇಶವನ್ನು ನೀಡುತ್ತಿದ್ದಾರೆ.

"ಯಾರೂ ನನ್ನನ್ನು ಹಾಡುವಂತೆ ಕೇಳಲಿಲ್ಲ, ನಾನೇ ಹೆಚ್ಚು ಜನರನ್ನು ತಲುಪುವ ಉದ್ದೇಶದಿಂದ ಹಾಡು ಹಾಡುತ್ತಿದ್ದೇನೆ. ಒಣ ಮತ್ತು ಹಸಿ ತ್ಯಾಜ್ಯವನ್ನು ಎಲ್ಲಿ ಹಾಕಬೇಕು ಎಂಬ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು, ಒಣ ಮತ್ತು ಹಸಿ ಕಸವನ್ನು ಬೇರ್ಪಡಿಸುವ ಬಗ್ಗೆ ಜನರಿಗೆ ಅರಿವು ಮೂಡಿಸಲು ನಾನು ಹಾಡುತ್ತೇನೆ. ಜನರು ಉತ್ತಮ ರೀತಿಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡಿದರೆ ಪಾಲಿಕೆಯ ಸ್ವಚ್ಛತಾ ಕಾರ್ಮಿಕರಿಗೆ ಸಾಕಷ್ಟು ಸಹಾಯಕವಾಗುತ್ತದೆ"ಎಂದು ಜಾಧವ್ ಹೇಳುತ್ತಾರೆ. "ಇತ್ತೀಚೆಗೆ ನಾನು ಹಾಡುವ ವೀಡಿಯೊ ವೈರಲ್ ಆಗಿದೆ. ನಾನು ಒಂದು ಸೆಮಿನಾರ್‌ಗೆ ಹೋಗಿ ಹಾಡು ಹಾಡಿದ್ದೆ, ಅದು ವೈರಲ್ ಆಯಿತು. ನಾನು ಕಳೆದ 25 ವರ್ಷಗಳಿಂದ ಸ್ವಚ್ಛತಾ ಕೆಲಸ ಮಾಡುತ್ತಿದ್ದೇನೆ, ಆದರೆ ಈಗ ಬದಲಾವಣೆಗಳು ಖಂಡಿತವಾಗಿಯೂ ಬಂದಿವೆ. ಸುಮಾರು 60 ಪ್ರತಿಶತದಷ್ಟು ಜನರು ಈಗ ನಿಯಮಗಳನ್ನು ಅರ್ಥಮಾಡಿಕೊಳ್ಳಲು ಆರಂಭಿಸಿದ್ದಾರೆ ಮತ್ತು ಅವುಗಳನ್ನು ಅನುಸರಿಸುತ್ತಿದ್ದಾರೆ" ಎಂದು ಅವರು ಹೇಳಿದ್ದಾರೆ.




ಹಾಡುತ್ತಾ ಸ್ವಚ್ಛಗೊಳಿಸುವುದು ಮಾತ್ರವಲ್ಲದೇ ಜಾಧವ್ ಅವರು, ಸ್ವತಃ ಸ್ವಚ್ಛತೆಯ ಬಗ್ಗೆ ವಿಭಿನ್ನ ಹಾಡುಗಳನ್ನು ರಚಿಸಿದ್ದಾರೆ, ಹಸಿ ಮತ್ತು ಒಣಗಿದ ಕಸವನ್ನು ಬೇರ್ಪಡಿಸುವಾಗ ಪ್ರತಿದಿನ ಬೆಳಿಗ್ಗೆ ಜನರ ಮುಂದೆ ಹಾಡುತ್ತಾರೆ. ಜನಪ್ರಿಯ ಬಾಲಿವುಡ್ ರಾಗಗಳ ರೀಮಿಕ್ಸ್ ಆಗಿರುವ ಅವರ ಹಾಡುಗಳು ಸ್ವಚ್ಛತೆಯ ಮಹತ್ವವನ್ನು ಜನರಿಗೆ ಅರ್ಥಮಾಡಿಕೊಡುವಲ್ಲಿ ಸಾಕಷ್ಟು ಪರಿಣಾಮಕಾರಿಯಾಗಿವೆ.

ಸಂಪಾದಕೀಯ ಸಹಕಾರ ಶೈಲೇಶ್ ಕುಲಕರ್ಣಿ, ರಾಧಾಕೃಷ್ಣ ಹೊಳ್ಳ, ಸುನಿಲ್ ಕುಲಕರ್ಣಿ (news13.in), ಸತ್ಯನಾರಾಯಣ ಶಾನಭಾಗ್

## ಅಯೋಧ್ಯೆಯಿಂದ ಜನಕಪುರಿಗೆ ಮದುವೆ ಮೆರವಣಿಗೆ!



ಶ್ರೀರಾಮನ ಊರಾದ ಅಯೋಧ್ಯೆಯಿಂದ ಸೀತೆಯ ಊರಾದ ಜನಕಪುರಿಗೆ ಸೀತಾರಾಮರ ಮದುವೆ ಮೆರವಣಿಗೆ ತೆರಳಲಿದೆ. ಇದೇನು ಈಗ ಮದುವೆಯೇ ಎಂದು ಅಚ್ಚರಿಪಡಬೇಡಿ. ಪ್ರತಿವರ್ಷ ನಡೆಯುವ 'ರಾಮ್ ಬರಾತ್' (ಮದುವೆ ಮೆರವಣಿಗೆ) ಇದು. ಈ ವರ್ಷ ಈ ಮೆರವಣಿಗೆ ನವೆಂಬರ್ 21 ರಂದು ನಡೆಯಲಿದೆ. ಅಯೋಧ್ಯೆಯ ಶ್ರೀರಾಮ ಜನ್ಮಭೂಮಿಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಆದೇಶಿಸಿ ಸುಪ್ರೀಂಕೋರ್ಟ್ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಈ ವರ್ಷ ಆಚರಣೆ ಹಿಂದಿಗಿಂತ ಸ್ವಲ್ಪ ಅದ್ದೂರಿಯಾಗಿಯೇ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ. ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು, ದೇವರನ್ನು ಬರಾತ್ ಮೂಲಕ ಅಯೋಧ್ಯೆಯಿಂದ ಜನಕಪುರಕ್ಕೆ ಎರಡು ಅಲಂಕೃತ ರಥಗಳಲ್ಲಿ ಕೊಂಡೊಯ್ಯಲಾಗುತ್ತದೆ. ರಾಮನ ಜೊತೆಗೆ ಭರತ ಮತ್ತು ಲಕ್ಷ್ಮಣರು ಕೂಡ ಇರಲಿದ್ದಾರೆ.

ಸ್ವಾಮೀಜಿಗಳು ಸೇರಿದಂತೆ 200 ಮಂದಿ 12 ವಾಹನಗಳಲ್ಲಿ ಈ ಮೆರವಣಿಗೆಯಲ್ಲಿ ಜನಕಪುರಕ್ಕೆ ತೆರಳಲಿದ್ದಾರೆ. ನ.21 ರಂದು ಮೆರವಣಿಗೆ ಅಯೋಧ್ಯೆಯಿಂದ ಹೊರಡಲಿದ್ದು, ನ.28 ರಂದು ಜನಕಪುರವನ್ನು ತಲುಪಲಿದೆ. ಜನಕಪುರ ಸೀತಾದೇವಿಯ ಜನ್ಮಸ್ಥಳವಾಗಿದೆ. ರಸ್ತೆ ಮಾರ್ಗದಲ್ಲಿ ಇನ್ನಷ್ಟು ಜನರು ಮೆರವಣಿಗೆಯಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ.

ಡಿ.1 ರಂದು ಜನಕಪುರದಲ್ಲಿ ರಾಮ ಮತ್ತು ಸೀತೆಯ ವಿವಾಹ ಜರುಗಲಿದೆ. ಇದರಲ್ಲಿ ಪಾಲ್ಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೂ ಆಹ್ವಾನ ನೀಡಲಾಗಿದೆ. ನೇಪಾಳದ ರಾಜಮನೆತನವನ್ನೂ ಆಹ್ವಾನಿಸಲಾಗಿದೆ.

ಧಾರ್ಮಿಕಸತ್ರ ಮಹಾಸಂಘದ ವತಿಯಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, 2002ರಲ್ಲಿ ಧಾರ್ಮಿಕ ಪ್ರವಾಸಗಳನ್ನು ಆಯೋಜಿಸಲು ವಿಎಚ್‌ಪಿ ಇದನ್ನು ಸ್ಥಾಪಿಸಿತು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕೂಡ ಇದರ ಪೋಷಕರಲ್ಲಿ ಒಬ್ಬರಾಗಿದ್ದರು.

## ಜಮ್ಮು– ಕಾಶ್ಮೀರ: 1145 ಯುವಕರು ಪೊಲೀಸ್ ಪಡೆಗೆ ಸೇರ್ಪಡೆ



ಹೊಸದಾಗಿ ರೂಪುಗೊಂಡ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದಲ್ಲಿ ಕಾನೂನು ಸುವ್ಯವಸ್ಥೆ ನಿಭಾಯಿಸಲು ಕಠಿಣ ತರಬೇತಿ ಪಡೆದುಕೊಂಡ ಒಟ್ಟು 1145 ಯುವಕರು ಸೋಮವಾರ ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಅಕಾಡೆಮಿಯಿಂದ ತೇರ್ಗಡೆಗೊಂಡು ಸೇವೆಗೆ ನಿಯುಕ್ತರಾಗಿದ್ದಾರೆ.

ತೇರ್ಗಡೆಗೊಂಡ ಯುವಕರಲ್ಲಿ, 39 ವಿಶೇಷ ಕಮಾಂಡೋಗಳು ಮತ್ತು ಪೊಲೀಸರು ಸೇರಿದ್ದಾರೆ. ಇವರು ಅಗ್ನಿ ಅನಾಹುತ, ಗಲಭೆ ಮತ್ತು ಕಲ್ಲು ತೂರಾಟದಂತಹ ಕೃತ್ಯಗಳನ್ನು ಎದುರಿಸಲು ವಿಶೇಷ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಆಗಸ್ಟ್ 5 ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ 370 ನೇ ವಿಧಿ ರದ್ದುಗೊಂಡ ಹಿನ್ನೆಲೆಯಲ್ಲಿ ಮೊದಲ ಬಾರಿಗೆ ಜಮ್ಮು ಕಾಶ್ಮೀರ ಪೊಲೀಸರು ಭಾರತದ ಸಂವಿಧಾನದ ಅಡಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

## ಕುಲಭೂಷಣ್ ಜಾಧವ್ ಪ್ರಕರಣ: ತನ್ನ ಸೇನಾ ಕಾಯ್ದೆಗೆ ತಿದ್ದುಪಡಿ ತರುತ್ತಿರುವ ಪಾಕ್



ತನ್ನ ಜೈಲಿನಲ್ಲಿರುವ ಭಾರತೀಯ ಪ್ರಜೆ ಕುಲಭೂಷಣ್ ಜಾಧವ್ ಅವರಿಗೆ ಅಂತರರಾಷ್ಟ್ರೀಯ ನ್ಯಾಯಾಲಯದ ತೀರ್ಪಿನ ಅನುಸಾರವಾಗಿ ನಾಗರಿಕ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಹಕ್ಕನ್ನು ನೀಡಲು ಪಾಕಿಸ್ತಾನವು ತನ್ನ ಸೇನಾ ಕಾಯ್ದೆಗೆ ತಿದ್ದುಪಡಿ ತರುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮಿಲಿಟರಿ ನ್ಯಾಯಾಲಯಗಳ ಅಡಿಯಲ್ಲಿ ವಿಚಾರಣೆಗೆ ಒಳಪಡುವ ವ್ಯಕ್ತಿಗಳು ಅಥವಾ ಗುಂಪುಗಳು ಮೇಲ್ಮನವಿ ಸಲ್ಲಿಸುವುದನ್ನು ಮತ್ತು ನಾಗರಿಕ ನ್ಯಾಯಾಲಯದಿಂದ ನ್ಯಾಯವನ್ನು ಕೋರುವುದನ್ನು ಪ್ರಸ್ತುತ ಪಾಕಿಸ್ತಾನದಲ್ಲಿ ಅಸ್ತಿತ್ವದಲ್ಲಿರುವ ಕಾಯ್ದೆ ನಿಷೇಧಿಸಿದೆ. ಹೀಗಾಗಿ ಜಾಧವ್‌ಗಾಗಿ ಸೇನಾ ಕಾಯ್ದೆಗೆ ವಿಶೇಷ ತಿದ್ದುಪಡಿ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ಜುಲೈನಲ್ಲಿ, ಅಂತರರಾಷ್ಟ್ರೀಯ ನ್ಯಾಯಾಲಯವು ಜಾಧವ್ ಪ್ರಕರಣದಲ್ಲಿ 15–1 ಮತಗಳಿಂದ ತೀರ್ಪನ್ನು ಪ್ರಕಟಿಸಿ, ಪಾಕಿಸ್ತಾನವು ವಿಯೆನ್ನಾ ಒಪ್ಪಂದದವನ್ನು ಉಲ್ಲಂಘಿಸಿದೆ ಎಂದು ಹೇಳಿ ಭಾರತದ ನಿಲುವನ್ನು ಎತ್ತಿಹಿಡಿದಿತ್ತು ಹಾಗೂ ಜಾಧವ್ ಅವರಿಗೆ ಭಾರತ ರಾಯಭಾರ ಕಛೇರಿಯ ಸಂಪರ್ಕ ನೀಡುವಂತೆ ಹೇಳಿತ್ತು. ಭಾರತದ ಪರ ಗೂಢಚರ್ಯೆ ಮಾಡುತ್ತಿದ್ದರು ಎಂಬ ಆರೋಪವನ್ನು ಹೊರಿಸಿ ಪಾಕಿಸ್ತಾನವು ಜಾಧವ್ ಅವರನ್ನು ಬಂಧಿಸಿತ್ತು. ಈಗ ಅಂತರರಾಷ್ಟ್ರೀಯ ವಲಯದಿಂದ ಒತ್ತಡ ಬರುತ್ತಿರುವ ಹಿನ್ನೆಲೆಯಲ್ಲಿ ತನ್ನ ಕಾನೂನಿಗೆ ತಿದ್ದುಪಡಿಯನ್ನು ತಂದು, ನಾಗರಿಕ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಜಾಧವ್ ಅವರಿಗೆ ಅನುವು ಮಾಡಿಕೊಡಲು ಮುಂದಾಗಿದೆ.

## ಗಂಗೆಯನ್ನು ಮಲಿನ ಮಾಡಿದರೆ 50 ಕೋಟಿ ರೂ. ದಂಡ: ಕಾಯ್ದೆ ತರಲಿದೆ ಕೇಂದ್ರ

ಗಂಗಾ ನದಿಯ ಶುದ್ಧೀಕರಣ ಮತ್ತು ನದಿ ನೀರನ್ನು ಸರಾಗವಾಗಿ ಹರಿಯುವಂತೆ ಮಾಡುವ ಗುರಿಯನ್ನು ತಲುಪುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಪ್ರಸ್ತುತ ನಡೆಯುತ್ತಿರುವ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಹತ್ವಾಕಾಂಕ್ಷೆಯ ರಾಷ್ಟ್ರ ಗಂಗಾ ನದಿ (ಪುನರುಜ್ಜೀವನ, ಸಂರಕ್ಷಣೆ ಮತ್ತು ನಿರ್ವಹಣೆ) ಮಸೂದೆಯನ್ನು ಅನುಮೋದಿಸಲು ನಿರ್ಧರಿಸಿದೆ.

ಈ ಮಸೂದೆಯು ಗಂಗಾ ನದಿಯನ್ನು ಮಲಿನ ಮಾಡುವವರ ಮೇಲೆ ರೂ. 50 ಕೋಟಿಗಳವರೆಗೆ ದಂಡವನ್ನು ವಿಧಿಸಲು ಮತ್ತು ಸೆರೆವಾಸವನ್ನು ನೀಡಲು ಅವಕಾಶ ಮಾಡಿಕೊಡಲಿದೆ. ಈ ಪ್ರಸ್ತಾಪಿತ ಮಸೂದೆಯಡಿಯಲ್ಲಿ ಗಂಗೆಯನ್ನು ಮಲಿನ ಮಾಡುವುದು ಜಾಮೀನುರಹಿತ ಅಪರಾಧವಾಗಿದೆ.

ಗಂಗಾತೀರದಲ್ಲಿ ನಿರ್ಮಿಸಲಾದ ಅಕ್ರಮ ಜೆಟ್ಟಿಗಳು ಮತ್ತು ಬಂದರುಗಳು, ನದಿಯ ನೀರನ್ನು ತಿರುಗಿಸುವಿಕೆ, ಅಕ್ರಮ ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಮತ್ತು ನದಿಪಾತ್ರದಿಂದ ಅಂತರ್ಜಲವನ್ನು ಅಕ್ರಮವಾಗಿ ಹೊರತೆಗೆಯುವುದು ಈ ಮಸೂದೆಯಡಿ ಶಿಕ್ಷಾರ್ಹ ಅಪರಾಧವಾಗಿದೆ.

ಗಂಗಾ ಮತ್ತು ಅದರ ಉಪನದಿಗಳ ಉದ್ದಕ್ಕೂ ಘಟ್ಟಗಳನ್ನು ಹಾಳುಮಾಡಿದರೆ ಅಥವಾ ದೋಷಪೂರಿತಗೊಳಿಸಿದರೆ ಭಾರಿ ದಂಡವನ್ನು ವಿಧಿಸಲು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಅಲ್ಲದೇ, ನದಿಯ ಸರಾಗ ಹರಿವಿಗೆ ಅಡಚಣೆ ಉಂಟುಮಾಡುವುದರ ವಿರುದ್ಧವೂ ಗರಿಷ್ಠ 50 ಕೋಟಿ ರೂಪಾಯಿಗಳ ದಂಡವನ್ನು ಪ್ರಸ್ತಾಪಿಸಲಾಗಿದೆ.

## ಪುಲ್ವಾಮ ಹುತಾತ್ಮರ ಗೌರವಾರ್ಥ 6,000 ಕಿಮೀ 'ಭಾರತ ಯಾತ್ರೆ' ನಡೆಸಿದ ನಾಲ್ವರ ತಂಡ

ಪುಲ್ವಾಮ ದಾಳಿಯಲ್ಲಿ ಹುತಾತ್ಮರಾದ ವೀರ ಯೋಧರಿಗೆ ಗೌರವ ಸಲ್ಲಿಸುವ ಸಲುವಾಗಿ ಮತ್ತು ಭಾರತೀಯ ಸೈನಿಕರ ಗೌರವಾರ್ಥ ನಾಲ್ಕು ಜನರ ತಂಡವು ದೆಹಲಿಯಿಂದ ಹೈದರಾಬಾದಿನವರೆಗೆ 12 ರಾಜ್ಯಗಳು ಮತ್ತು 599 ನಗರಗಳನ್ನು ಒಳಗೊಂಡ 6,000 ಕಿಲೋಮೀಟರುಗಳ 'ಭಾರತ ಯಾತ್ರೆ'ಯನ್ನು ನಡೆಸಿದೆ.

ಈ ವರ್ಷದ ಫೆಬ್ರವರಿ 14 ರಂದು ನಡೆದ ಪುಲ್ವಾಮ ದಾಳಿಯಲ್ಲಿ ಹತ್ಯೆಗೀಡಾದ ಸೈನಿಕರ ಗೌರವಾರ್ಥ ಆರಂಭಿಸಲಾದ 'ಐ ಸ್ಟ್ಯಾಂಡ್ ಫಾರ್ ದಿಸ್ ನೇಷನ್' ಉಪಕ್ರಮದ ಭಾಗವಾಗಿ 'ಭಾರತ ಯಾತ್ರೆ'ಯನ್ನು ಹಮ್ಮಿಕೊಳ್ಳಲಾಗಿದೆ. "ನಮ್ಮ ಮುಖ್ಯ ಧ್ಯೇಯವೆಂದರೆ ಪ್ರತಿಯೊಬ್ಬ ಭಾರತೀಯರು ವೀರ ಸೈನಿಕರಿಗೆ ನಮಸ್ಕರಿಸಬೇಕು ಮತ್ತು ಅವರೊಂದಿಗೆ ಸದಾ ನಿಲ್ಲಬೇಕು ಎಂಬುದು" ಎಂದು 'ಐ ಸ್ಟ್ಯಾಂಡ್ ಫಾರ್ ದಿಸ್ ನೇಷನ್' ತಂಡದ ಸದಸ್ಯ ರತನ್ ರಾಜು ಹೇಳುತ್ತಾರೆ.

## ಸೇನೆಯ ಮೊದಲ ಮಹಿಳಾ ಜಡ್ಜ್ ಅಡ್ವೊಕೇಟ್ ಜನರಲ್ ಆಫೀಸರ್ ಆದ ಲೆ. ಕ. ಜ್ಯೋತಿ ಶರ್ಮಾ

ವಿದೇಶಿ ಕಾರ್ಯಾಚರಣೆಗೆ ನಿಯೋಜಿಸಲಾಗಿರುವ ಭಾರತೀಯ ಸೇನೆಯ ಮೊದಲ ಮಹಿಳಾ ಜಡ್ಜ್ ಅಡ್ವೊಕೇಟ್ ಜನರಲ್ ಆಫೀಸರ್ ಆಗಿ ಲೆಫ್ಟಿನೆಂಟ್ ಕರ್ನಲ್ ಜ್ಯೋತಿ ಶರ್ಮಾ ಅವರನ್ನು ನೇಮಿಸಲಾಗಿದೆ. ಜ್ಯೋತಿ ಶರ್ಮಾ ಅವರು, ಸೀಷೆಲ್ ಸರ್ಕಾರದೊಂದಿಗೆ ಮಿಲಿಟರಿ ಕಾನೂನು ತಜ್ಞರಾಗಿ ನೇಮಕಗೊಳ್ಳಲಿದ್ದಾರೆ ಎಂದು ಭಾರತೀಯ ಸೇನಾಧಿಕಾರಿಗಳು ತಿಳಿಸಿದ್ದಾರೆ. ರಕ್ಷಣಾ ಮತ್ತು ಮಿಲಿಟರಿ ಕಾಯ್ದೆಯ ಬಗ್ಗೆ ಸೀಷೆಲ್ ಸರ್ಕಾರದ ಅಧಿಕಾರಿಗಳಿಗೆ ಸಲಹೆ ನೀಡುವುದು ಲೆಫ್ಟಿನೆಂಟ್ ಕರ್ನಲ್ ಜ್ಯೋತಿಯವರ ಮುಖ್ಯ ಜವಾಬ್ದಾರಿಯಾಗಿರಲಿದೆ.

ಕಳೆದ ಸೆಪ್ಟಂಬರ್ ತಿಂಗಳಿನಲ್ಲಿ, ವಿಂಗ್ ಕಮಾಂಡರ್ ಅಂಜಲಿ ಸಿಂಗ್ ಅವರು ರಷ್ಯಾದ ಭಾರತೀಯ ರಾಯಭಾರ ಕಛೇರಿಗೆ ಭಾರತದ ಮೊದಲ ಮಿಲಿಟರಿ ರಾಜತಾಂತ್ರಿಕರಾಗಿ ವಿದೇಶಿ ಕಾರ್ಯಾಚರಣೆಗಾಗಿ ನಿಯೋಜನೆಗೊಂಡರು. ಅದಕ್ಕೂ ಮೊದಲು, ವಿಂಗ್ ಕಮಾಂಡರ್ ಎಸ್. ಧಾಮಿ ಅವರು ಫ್ಲೈಯಿಂಗ್ ಯುನಿಟ್‌ನ ಮೊದಲ ಮಹಿಳಾ ಫ್ಲೈಟ್ ಕಮಾಂಡರ್ ಆದರು. ಸೇನೆಯ ಮಿಲಿಟರಿ ಪೊಲೀಸ್ ಕಾರ್ಪ್ಸ್‌ಗೆ ಮಹಿಳೆಯರನ್ನೂ ನಿಯೋಜನೆಗೊಳಿಸಲು ಈಗಾಗಲೇ ಸಿದ್ಧತೆ ಮಾಡಿಕೊಳ್ಳುತ್ತಿದೆ. ಒಟ್ಟಿನಲ್ಲಿ ಸೇನೆಯಲ್ಲಿ ಮಹಿಳೆಯರಿಗೂ ಸಮಾನ ಪ್ರಾತಿನಿಧ್ಯಗಳು ಸಿಗುತ್ತಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ.

## ಕಾಶ್ಮೀರ: ಉಗ್ರದಮನ ಕಾರ್ಯಾಚರಣೆಯಲ್ಲಿ ಯೋಧರಿಗೆ ಸಹಾಯ ಮಾಡಲಿದೆ ರೋಬೋಟ್‌ಗಳು

ಕೂಂಬಿಂಗ್ ಕಾರ್ಯಾಚರಣೆಗಳನ್ನು ನಡೆಸುವುದು, ಕಟ್ಟಡಗಳಲ್ಲಿ ಅವಿತಿರುವ ಉಗ್ರರ ವಿರುದ್ಧ ಕಾರ್ಯಾಚರಣೆಗಳನ್ನು ನಡೆಸುವುದು ಸೇರಿದಂತೆ ವಿವಿಧ ಉಗ್ರ ವಿರೋಧಿ ಕಾರ್ಯಾಚರಣೆಗಳಲ್ಲಿ ಇನ್ನು ಮುಂದೆ ರೋಬೋಟ್‌ಗಳು ಯೋಧರಿಗೆ ಸಹಾಯ ಮಾಡಲಿದೆ. ಕೇಂದ್ರ ರಕ್ಷಣಾ ಸಚಿವಾಲಯವು ಇದಕ್ಕಾಗಿ 550 ಕಣ್ಗಾವಲು ರೋಬೋಟ್‌ಗಳನ್ನು ಖರೀದಿ ಮಾಡುವ ಪ್ರಕ್ರಿಯೆಯನ್ನು ಆರಂಭಿಸಿದೆ. ಜಮ್ಮು ಕಾಶ್ಮೀರದಲ್ಲಿ ನಡೆಯುವ ಕಾರ್ಯಾಚರಣೆಗಳಲ್ಲಿ ಭಾಗಿಯಾಗಲು 25 ವರ್ಷ ಜೀವಿತಾವಧಿ ಇರುವ ರೋಬೋಟ್‌ಗಳನ್ನು ನಿಯೋಜನೆಗೊಳಿಸಲಾಗುತ್ತಿದೆ. ಈ ರೋಬೋಟ್‌ಗಳು ಮೆಟ್ಟಿಲುಗಳನ್ನು ಹತ್ತಲು ಮತ್ತು ಕಟ್ಟಡಗಳಲ್ಲಿ ಅವಿತಿರುವ ಉಗ್ರರ ವಿರುದ್ಧ ಗ್ರೆನೇಡ್ ದಾಳಿಗಳನ್ನು ನಡೆಸಲು, 20 ಸೆಂ. ಮೀ. ಆಳದ ನೀರಿಗೆ ಇಳಿಯಲು ಸಮರ್ಥವಾಗಿರಲಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಣಿವೆಯಲ್ಲಿ ನಡೆಯುವ ಕೂಂಬಿಂಗ್ ಮತ್ತು ಶೋಧ ಕಾರ್ಯಾಚರಣೆಯ ವೇಳೆ ಈ ರೋಬೋಟ್‌ಗಳು ಸೈನಿಕರಿಗಿಂತ ಸ್ವಲ್ಪ ಮುಂದೆಯೇ ಹೋಗುವುದರಿಂದ ಉಗ್ರರ ಗುಂಡು ಅಥವಾ ಬಾಂಬ್ ಸ್ಫೋಟದಿಂದಾಗಿ ಆಗುವ ಜೀವಹಾನಿಗಳು ಕಡಿಮೆಯಾಗಲಿವೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 1, December 2019

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46AT BENGALURU PSO, BG-560026 on 10th and 25th of every Month REG.NO.CPMG/KA/BGS/102/2018-20

FORTNIGHTLY 1-12-2019



## ರಾಮ ಮಂದಿರ ನಿರ್ಮಾಣಕ್ಕೆ ಹಣ ಸಂಗ್ರಹಿಸಲಾಗುತ್ತಿಲ್ಲ. ಜನ ಮೋಸ ಹೋಗಬಾರದು: ವಿಎಚ್‌ಪಿ ಮನವಿ



ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಮಾಡಲು ಯಾವುದೇ ಹಣಸಂಗ್ರಹ ಕಾರ್ಯವನ್ನು ಮಾಡುತ್ತಿಲ್ಲ. ಜನರು ಯಾವುದೇ ಕಾರಣಕ್ಕೂ ಮೋಸ ಹೋಗಬಾರದು ಎಂದು ವಿಶ್ವ ಹಿಂದೂ ಪರಿಷತ್ ಸ್ಪಷ್ಟಪಡಿಸಿದೆ. ಮಂದಿರದ ಹೆಸರಿನಲ್ಲಿ ಕೆಲವರು ಹಣ ಸಂಗ್ರಹಿಸುತ್ತಿದ್ದಾರೆ ಎಂಬ ಮಾಹಿತಿಯ ಹಿನ್ನೆಲೆಯಲ್ಲಿ ಈ ಸಂದೇಶವನ್ನು ಅದು ನೀಡಿದೆ.

"ರಾಮ ಮಂದಿರ ನಿರ್ಮಾಣಕ್ಕಾಗಿ 1989 ರಿಂದಲೂ ವಿಶ್ವ ಹಿಂದೂ ಪರಿಷತ್ ಆಗಲಿ, ಶ್ರೀ ರಾಮ ಜನ್ಮಭೂಮಿ ನ್ಯಾಸವಾಗಲಿ ಹಣ ಸಂಗ್ರಹಿಸಿಲ್ಲ ಅಥವಾ ಹಣ ಸಂಗ್ರಹಿಸುವಂತೆ ಘೋಷಣೆಯನ್ನೂ ಮಾಡಿಲ್ಲ" ಎಂದು ವಿಎಚ್‌ಪಿಯ ಅಂತಾರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಂಡೆ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

## ಡಿಡಿಯಲ್ಲಿ ಸೇವಾಕಾರ್ಯಗಳನ್ನು ಪರಿಚಯಿಸುವ ಧಾರಾವಾಹಿ 'ಸಮರ್ಪಣಾ'




ಸೇವೆ ಭಾರತದ ಪರಂಪರೆ. ಸ್ವಂತ ಸುಖವನ್ನು ಬಯಸದೆ, ಸಮಾಜದ ಹಿತದೃಷ್ಟಿಯಿಂದಲೇ ಜೀವನದ ಸಾರ್ಥಕತೆಯನ್ನು ಪಡೆಯುವುದು, ನಿಸ್ವಾರ್ಥ ಮನೋಭಾವವನ್ನು ಹೊಂದುವುದು, ಅನಾಮಧೇಯರಾಗಿ ಉಳಿಯುವುದು ಮತ್ತು ಜೀವಿತಾವಧಿಯವರೆಗೂ ಕೆಲಸ ಮಾಡುವುದು ಯಾವಾಗಲೂ ಭಾರತೀಯ ಸೇವಾ ಸಾಧಕನ ವಿಶೇಷತೆಯಾಗಿರುತ್ತದೆ.

ಸೇವೆಯಲ್ಲಿ ನಿರತರಾಗಿರುವ ಸಂಸ್ಥೆಗಳ, ವ್ಯಕ್ತಿಗಳ ಯಶೋಗಾಥೆಯನ್ನು ಒಳಗೊಂಡ 'ಸಮರ್ಪಣಾ' ಎಂಬ ಹೆಸರಿನ ಹಿಂದಿ ಧಾರಾವಾಹಿ ದೂರದರ್ಶನದ ರಾಷ್ಟ್ರೀಯ ವಾಹಿನಿಯಲ್ಲಿ 2019ರ ನವೆಂಬರ್ 17 ರಿಂದ (ಭಾನುವಾರ) ಪ್ರಾರಂಭವಾಗಿದೆ. ಈ ಧಾರಾವಾಹಿಯು 52 ಭಾಗಗಳನ್ನು ಹೊಂದಿದ್ದು, ದೂರದರ್ಶನದಲ್ಲಿ ಪ್ರತಿ ಭಾನುವಾರ ಬೆಳಿಗ್ಗೆ 10 ಗಂಟೆಗೆ ಪ್ರಸಾರವಾಗಲಿದೆ. ಪ್ರಸಿದ್ಧ ಮರಾಠಿ ನಾಟಕ ಬರಹಗಾರ ಅಭಿರಾಮ್ ದಾಮೋದರ್ ಭಂಕಮ್ಕರ್ ಬರೆದಿದ್ದಾರೆ. ಈ ಧಾರಾವಾಹಿಗೆ ವ್ಯಾಪಕ ಪ್ರಚಾರ ನೀಡುವ ಮೂಲಕ ಸಮಾಜದಲ್ಲಿ ಸಕಾರಾತ್ಮಕತೆಯ ಮನೋಭಾವವನ್ನು ಹೆಚ್ಚಿಸುವುದು ಎಲ್ಲರ ಕರ್ತವ್ಯವಾಗಿದೆ.

## ಜೆಎನ್‌ಯು ಆವರಣದಲ್ಲಿ ವಿವೇಕಾನಂದ ಪ್ರತಿಮೆ ಧ್ವಂಸ



ದೆಹಲಿಯ ಜೆಎನ್‌ಯು (ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ) ಆವರಣದಲ್ಲಿ ನಿರ್ಮಾಣವಾಗಿದ್ದ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಧ್ವಂಸ ಮಾಡಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಲಾಗಿದೆ. ನ. 14 ರಂದು ಪ್ರತಿಮೆಯನ್ನು ಧ್ವಂಸ ಮಾಡಲಾಗಿತ್ತು. ಈ ಪ್ರತಿಮೆಯು ಮುಂದಿನ ವರ್ಷ ಜನವರಿಯಲ್ಲಿ ಅನಾವರಣಗೊಳ್ಳುವುದರಲ್ಲಿತ್ತು. ಪ್ರತಿಮೆಯನ್ನು ನಾಶ ಮಾಡಿದ ಕಿಡಿಗೇಡಿಗಳು ಆ ಸ್ಥಳದಲ್ಲಿ ಅತ್ಯಂತ ಕೀಳುಭಾಷೆಯಲ್ಲಿ ದೇಶವಿರೋಧಿ ಸಂದೇಶಗಳನ್ನೂ ಬರೆದಿದ್ದಾರೆ.

ಎಡಪಂಥೀಯ ಉಪನ್ಯಾಸಕರೇ ಹೆಚ್ಚಾಗಿರುವ ಜೆಎನ್‌ಯುನಲ್ಲಿ ರಾಷ್ಟ್ರವಿರೋಧಿ ಮಾನಸಿಕತೆಯನ್ನು ತುಂಬುವ ಕೆಲಸ ಕಳೆದ ಅನೇಕ ದಶಕಗಳಿಂದ ನಡೆಯುತ್ತಿದ್ದು ಇತ್ತೀಚೆಗೆ ಅಲ್ಲಿನ ಹಾಸ್ಟೆಲ್ ಶುಲ್ಕ ಹೆಚ್ಚಿಸಿದ್ದನ್ನು ವಿರೋಧಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು. ಸರ್ಕಾರದಿಂದ ಕೋಟಿಗಟ್ಟಲೆ ಹಣ ಪಡೆದು ದೇಶವಿರೋಧಿಗಳನ್ನು ಸೃಷ್ಟಿಸುವ ಅಗತ್ಯವೇನಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ನಡೆಯುತ್ತಿದೆ. ಹಲವರು ಜೆಎನ್‌ಯುವನ್ನು ಮುಚ್ಚಬಾರದೇಕೆ ಎಂದು ಕೂಡ ಪ್ರಶ್ನೆ ಮಾಡುತ್ತಿದ್ದಾರೆ.

## ಇಂಡೋನೇಷ್ಯಾದ ಹಿಂದೂ ದೇಗುಲದಲ್ಲಿ 1,163 ವರ್ಷಗಳ ಬಳಿಕ ಅಭಿಷೇಕ

ಇಂಡೋನೇಷ್ಯಾದ ಪ್ರಂಬನನ್ ದೇಗುಲದಲ್ಲಿ 1,163 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ನವೆಂಬರ್ 12ರಂದು ಅಭಿಷೇಕ ಸಮಾರಂಭವು ನೆರವೇರಿತು. ಇದರಲ್ಲಿ ಇಂಡೋನೇಷ್ಯಾದಾದ್ಯಂತದಿಂದ ಬಂದ ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಇದು ಇಂಡೋನೇಷ್ಯಾದ ಅತಿದೊಡ್ಡ ಹಿಂದೂ ದೇವಾಲಯವಾಗಿದೆ ಮತ್ತು ಆಗ್ನೇಯ ಏಷ್ಯಾದ ಎರಡನೇ ಅತಿ ದೊಡ್ಡ ದೇಗುಲವಾಗಿದೆ.

ದೇವಾಲಯದ ಸ್ಥಳವನ್ನು ಸ್ವಚ್ಛಗೊಳಿಸಲು ಮತ್ತು ಶುದ್ಧೀಕರಿಸಲು ಅಭಿಷೇಕ ಕಾರ್ಯವನ್ನು 1,163 ವರ್ಷಗಳಲ್ಲೇ ಮೊದಲ ಬಾರಿಗೆ ಇಲ್ಲಿ ನೆರವೇರಿಸಲಾಯಿತು. "ಕ್ರಿ.ಶ 856 ರ ನವೆಂಬರ್ 12ರಂದು ಈ ದೇವಾಲಯವನ್ನು ಸ್ಥಾಪಿಸಲಾಗಿದೆ ಎಂಬುದನ್ನು ನಾವು ಶಾಸನದ ಮೂಲಕ ಕಂಡುಹಿಡಿದ ನಂತರ, ದೇಗುಲದಲ್ಲಿ ಹಲವು ಪೂಜಾ ಕೈಂಕರ್ಯಗಳನ್ನು ನಡೆಸಲು ಹಿಂದೂಗಳು ಮುಂದಾದೆವು. ಇದರ ಭಾಗವಾಗಿ ಅಭಿಷೇಕವನ್ನೂ ನೆರವೇರಿಸಲಾಯಿತು. ಮೂಲತಃ ಈ ದೇಗುಲವನ್ನು ರಾಕೈ ಪಿಕಾಟನ್ ದಯಾ ಸೆಲಾಡು ಉದ್ಘಾಟಿಸಿದ್ದರು ಎಂದು ಹೇಳಲಾಗಿದೆ" ಎಂದು ಅಭಿಷೇಕ ಸಮಿತಿಯ ಸದಸ್ಯ ಮೇಧ ಅಸ್ತ್ರ ತನಯಾ ಹೇಳಿದರು.

## ಜಮ್ಮು ಕಾಶ್ಮೀರದಲ್ಲಿ 370ನೇ ವಿಧಿ ರದ್ದತಿಯಿಂದ ಮಾನವ ಹಕ್ಕುಗಳ ಪುನಃಸ್ಥಾಪನೆ



1990ರಲ್ಲಿ ಕಾಶ್ಮೀರಿ ಹಿಂದೂಗಳು ಅನುಭವಿಸಿದ ಭೀಕರತೆ ಮತ್ತು ಕ್ರೂರತೆಯನ್ನು ನೆನಪಿಸಿಕೊಂಡಿರುವ ಅಂಕಣಕಾರ್ತಿ ಸುನಂದಾ ವಸಿಷ್ಠ ಅವರು, ಕಾಶ್ಮೀರದಲ್ಲಿ 370 ನೇ ವಿಧಿಯನ್ನು ರದ್ದುಪಡಿಸುವುದರಿಂದ ಮಾನವ ಹಕ್ಕುಗಳ ಪುನಃಸ್ಥಾಪನೆಯಾಗುತ್ತದೆ ಎಂದು ಮಾನವ ಹಕ್ಕುಗಳ ಕುರಿತ ಯುಎಸ್ ಕಾಂಗ್ರೆಸ್ಸಿನ ಸಮಿತಿಗೆ ತಿಳಿಸಿದ್ದಾರೆ. "ನಾನು ಭಾರತದ ಕಾಶ್ಮೀರ ಕಣಿವೆಯ ಅಲ್ಪಸಂಖ್ಯಾತ ಹಿಂದೂ ಸಮಾಜದ ಸದಸ್ಯಳಾಗಿದ್ದೇನೆ, ಸ್ವತಂತ್ರ ಭಾರತವು ಕಂಡ ಅತೀ ಕೆಟ್ಟ ಜನಾಂಗೀಯ ಶುದ್ಧೀಕರಣಕ್ಕೆ ನಾನು ಬಲಿಯಾಗಿದ್ದೇನೆ" ಎಂದು ಅವರು ಹೇಳಿದ್ದಾರೆ.

ವಾಷಿಂಗ್ಟನ್‌ನಲ್ಲಿ ಟೋಮ್ ಲ್ಯಾಂಟೋಸ್ ಮಾನವ ಹಕ್ಕು ಆಯೋಗ ಆಯೋಜಿಸಿದ್ದ ವಿಚಾರಣೆಯಲ್ಲಿ ಭಾಗಿಯಾದ ಅವರು, "ನಾನು ಅಂದು ಬದುಕುಳಿದ ಕಾರಣದಿಂದಾಗಿ ಇಂದು ಇಲ್ಲಿ ಮಾತನಾಡುತ್ತಿದ್ದೇನೆ. ಬೇರೆಯವರು ನನ್ನಷ್ಟು ಅದೃಷ್ಟವಂತರಾಗಿಲ್ಲ" ಎಂದಿದ್ದಾರೆ. ಅಲ್ಲದೇ, ಕಾಶ್ಮೀರಿಗಳ ವಿರುದ್ಧ ನಡೆದ ಭೀಕರ ದುಷ್ಕೃತ್ಯಗಳ ವಿವರಣೆಯನ್ನೂ ಅವರು ನೀಡಿದ್ದಾರೆ. ಅವರ ಈ ಭಾಷಣದ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಲಕ್ಷಾಂತರ ಮಂದಿ ನೋಡಿದ್ದು, ಎಲ್ಲೆಡೆ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ.

## ದೇಶಾದ್ಯಂತ ರಾಷ್ಟ್ರೀಯ ಪೌರತ್ವ ನೋಂದಣಿ



ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ದೇಶವ್ಯಾಪಿಯಾಗಿ ಅನುಷ್ಠಾನಕ್ಕೆ ತರಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ರಾಜ್ಯಸಭೆಯಲ್ಲಿ ಘೋಷಿಸಿದ್ದಾರೆ. ಎನ್‌ಆರ್‌ಸಿ ಕುರಿತ ಚರ್ಚೆಯ ಸಂದರ್ಭದಲ್ಲಿ ಮಾತನಾಡಿದ ಅವರು, "ಎನ್‌ಆರ್‌ಸಿಯನ್ನು ರಾಷ್ಟ್ರವ್ಯಾಪಿಯಾಗಿ ಅನುಷ್ಠಾನಕ್ಕೆ ತರಲಾಗುತ್ತದೆ. ಪೌರತ್ವ ತಿದ್ದುಪಡಿ ಮಸೂದೆಗಿಂತ ಇದು ಭಿನ್ನವಾಗಿರುತ್ತದೆ. ಇದು ಯಾವುದೇ ರಿಲಿಜನ್ನಿನ ಅನುಯಾಯಿಗಳನ್ನು ಗುರಿಯಾಗಿಸಿ ತೆಗೆದುಕೊಳ್ಳುವ ಕ್ರಮವಲ್ಲ. ಈಗಾಗಲೇ ಅಸ್ಸಾಂನಲ್ಲಿ ಎನ್‌ಆರ್‌ಸಿ ಅನುಷ್ಠಾನಕ್ಕೆ ಬಂದಿದೆ. ದೇಶವ್ಯಾಪಿಯಾಗಿ ಅನುಷ್ಠಾನಕ್ಕೆ ಬಂದ ಬಳಿಕ ಮತ್ತೊಮ್ಮೆ ಸಹಜವಾಗಿಯೇ ಅಸ್ಸಾಂನಲ್ಲೂ ಅನುಷ್ಠಾನವಾಗಲಿದೆ ಎಂದು ಅವರು ಹೇಳಿದ್ದಾರೆ. ಎನ್‌ಆರ್‌ಸಿ ಪ್ರಕ್ರಿಯೆಯನ್ನು ಸುಪ್ರೀಂಕೋರ್ಟ್ ಮೇಲ್ವಿಚಾರಣೆ ಮಾಡುತ್ತದೆ. ಹಾಗಾಗಿ, ಯಾರೂ ಭಯಪಡುವ ಅಗತ್ಯವಿಲ್ಲ" ಎಂದು ಅವರು ತಿಳಿಸಿದ್ದಾರೆ.

ದೇಶದೊಳಗೆ ಅಕ್ರಮವಾಗಿ ನುಸುಳುತ್ತಿರುವ ಬಾಂಗ್ಲಾದೇಶಿಗರನ್ನು, ರೋಹಿಂಗ್ಯಾಗಳನ್ನು ಗುರುತಿಸಿ ಹೊರ ಹಾಕುವ ನಿಟ್ಟಿನಲ್ಲಿ ರಾಷ್ಟ್ರವ್ಯಾಪಿಯಾಗಿ ರಾಷ್ಟ್ರೀಯ ಪೌರತ್ವ ನೋಂದಣಿಯನ್ನು ಜಾರಿಗೆ ತರಲಾಗುತ್ತಿದೆ. ದೇಶದ ಸುರಕ್ಷತೆಯ ದೃಷ್ಟಿಯಿಂದ ಇದೊಂದು ಅತ್ಯುತ್ತಮ ಬೆಳವಣಿಗೆ ಎಂದೇ ಪರಿಗಣಿಸಲಾಗುತ್ತಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.